**COMPROMISE DECREE**

**Date of Institution: 07.01.2025**
**Date of Disposal : 11.07.2026**

**IN THE COURT OF THE PRL. CIVIL JUDGE AND JMFC, INDI.**

1) ಫೌಜೀಯಾಕೌಸರ ಗಂ.ಗೌಸಪಾಕ ಬಾಗಾಯತ – – – –
– – – –ವಾದಿ

**–: ವಿರುದ್ಧ :–**

1) ಗೌಸಪಾಕ ತಂ. ಬಂದೇನವಾಜ ಬಾಗಾಯತ – – – – –ಪ್ರತಿವಾದಿಯರು

**SUIT FOR DECLARATION OF DESOLATION OF MARRIAGE**

**PRAYER:**

1) The Hon'ble court may be pleased to pass a decree for dissolution of marriage be granted by declaring that, the marriage of plaintiff with defendant performed on 27.04.2014 in between plaintiff and defendant is dissolved and they are no more husband and wife.

The Compromise petition is coming on this **11th July 2026**, for final disposal before **Sri.Sunil Kumar M.S. B.A.L.L.B Prl. Civil Judge and JMFC Indi,** in the presence of Sri.S.P.P Advocate for the Plaintiff, and Sri:S.V.G. advocate for Defendant.

**It is hereby ordered and decreed That.**

**ORDER**

The terms of Compromise is as under order 23 Rule 3 of CPC is accepted.

ಇದರಲ್ಲಿ ವಾದಿ ಮತ್ತು ಪ್ರತಿವಾದಿ ಇವರು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸುವ ಅಪಸತ ಅರ್ಜಿ ಈ ಕೆಳಗಿನಂತೆ ಇರುತ್ತದೆ.

ವಾದಿಯು ಪ್ರತಿವಾದಿಯ ಕಾನೂನು ಬದ್ದ ಹೆಂಡತಿ ಇದ್ದು, ಇವರಿಬ್ಬರ ವಿವಾಹವು ದಿನಾಂಕ: 27–04–2014 ರಂದು ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ, ನಿಂಬಾಳ ಕೆ.ಡಿ ಗ್ರಾಮದಲ್ಲಿ ವಾದಿಯ ಮನೆಯ ಮುಂದೆ ಮುಸ್ಲಿಂ ರೀತಿ– ರಿವಾಜ ಪ್ರಕಾರ ಆಗಿದ್ದು ಇರುತ್ತದೆ. ವಾದಿ ಮತ್ತು ಪ್ರತಿವಾದಿಯರು ಮದುವೆಯಾದ ನಂತರ ಸುಮಾರು 6 ವರ್ಷಗಳವರೆಗೆ ಒಳ್ಳೆಯ ಜೀವನ ನಡೆಸಿರುತ್ತಾರೆ. ಇವರ ವೈವಾಹಿಕ ಜೀವನದಲ್ಲಿ

ಅವರಿಬ್ಬರಿಗೆ ಒಂದು ಗಂಡು ಮಗು ಜನಿಸಿದ್ದು, ಆತನ ಹೆಸರು ಅಹ್ಮದಅಲಿ @ ಅರಹಾನ ಅಂತಾ ಇರುತ್ತದೆ. ಈಗ ಅರಹಾನ ಪ್ರತಿವಾದಿಯ ಜೊತೆಯಲ್ಲಿ ವಾಸವಾಗಿರುತ್ತಾನೆ. ಅವನ ಪಾಲನೆ, ಪೋಷಣೆ, ಶಾಲೆಯ ಹಾಗೂ ಇನ್ನಿತರೆ ಖರ್ಚುಗಳನ್ನು ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದಾನೆ.

ವಾದಿ ಮತ್ತು ಪ್ರತಿವಾದಿಯರು ಇವರಿಬ್ಬರ ಮಧ್ಯ ಮನಸಾ–ಮನಸ್ಸು ಸರಿ ಇಲ್ಲದ ಕಾರಣ ಸಾಕಷ್ಟು ಸಲ ಜಗಳ, ತಂಟೆ ತಕರಾರುಗಳು ಆಗಿದ್ದು, ಅವುಗಳನ್ನು ಬಗೆ ಹರಿಸಲು ಸಾಕಷ್ಟು ಸಲ ಹಿರಿಯರು ಮತ್ತು ಸಂಬಂಧಿಕರು ಪ್ರಯತ್ನ ಪಟ್ಟರು ಯಾವುದೇ ಫಲಕಾರಿಯಾಗದೇ ಅವರ ಮಧ್ಯೆ ವೈ–ಮನಸ್ಸು ಹಾಗೆಯೇ ಇರುತ್ತದೆ. ಮತ್ತು ಈಗ ಅವರು 4–5 ವರ್ಷಗಳಿಂದ ಪ್ರತ್ಯೇಕವಾಗಿ ವಾಸವಾಗಿರುತ್ತಾರೆ. ಕಾರಣ ಅವರು ಒಬ್ಬರಿಗೊಬ್ಬರು ವಿಚ್ಛೇಧನ ನೀಡಿ ತಮ್ಮ ತಮ್ಮ ಮರ್ಜಿಯ ಪ್ರಕಾರ ಸ್ವ–ಇಚ್ಚೆಯಿಂದ ಪ್ರತ್ಯೇಕವಾಗಿ ಜೀವನ ನಡೆಸಲು ಒಪ್ಪಿಕೊಂಡಿರುತ್ತಾರೆ.

ಊರ ಹಿರಿಯರು ಮತ್ತು ವಾದಿ ಮತ್ತು ಪ್ರತಿವಾದಿ ಹಾಗೂ ಇಬ್ಬರ ಮನೆಯ ಹಿರಿಯರು ಸೇರಿ ಈ ಕೆಳಗೆ ಹೇಳಿದಂತೆ ಷರತ್ತಿಗೆ ಅನುಗುಣವಾಗಿ ವಿಚ್ಛೇಧನ ನೀಡಲು, ಒಬ್ಬರಿಗೊಬ್ಬರು ತಯಾರಿರುತ್ತಾರೆ.

## –: ಷರತ್ತುಗಳು :–

ಇನ್ನೂ ಮುಂದೆ ವಿಚ್ಚೇಧನ ಪಡೆದ ನಂತರ ವಾದಿ ಪ್ರತಿವಾದಿಯ ಮೇಲೆ ಯಾವುದೇ ಕಾನೂನು ಬದ್ದ ಹಕ್ಕು ಸ್ವತ್ತಾ ಇರುವುದಿಲ್ಲ. ಅದೇ ರೀತಿ ಪ್ರತಿವಾದಿ ವಾದಿಯ ಮೇಲೆ ಯಾವುದೇ ಕಾನೂನು ಬದ್ದ ಹಕ್ಕು ಸ್ವತ್ತಾ ಇರುವುದಿಲ್ಲ. ಇಬ್ಬರು ತಮ್ಮ–ತಮ್ಮ ಸ್ವ–ಇಚ್ಚಾ ಪ್ರಕಾರ ಬೇರೆ ಮದುವೆ ಆಗಬಹುದು, ಅದಕ್ಕೆ ಒಬ್ಬರಿಗೊಬ್ಬರು ತಕರಾರು ಮಾಡುವಂತಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ.

ವಾದಿಯು ಪ್ರತಿವಾದಿಯ ಆಸ್ತಿ, ಜೀವನಾಂಶದ ಹಕ್ಕನ್ನು ಬಿಟ್ಟುಕೊಟ್ಟಿರುತ್ತಾಳೆ ಹಾಗೂ ಪ್ರತಿವಾದಿಯ ಆಸ್ತಿಯಲ್ಲಿ ಮತ್ತು ಆತನ ಮನೆತನದ ಆಸ್ತಿಯಲ್ಲಿ ಯಾವುದೇ ಪಾಲು ಕೇಳುವಂತಿಲ್ಲ, ಅದೇ ರೀತಿ ಪ್ರತಿವಾದಿಯು ವಾದಿಯ ಆಸ್ತಿಯಲ್ಲಿ ಮತ್ತು ಆಕೆಯ ಮನೆತನದ ಆಸ್ತಿಯಲ್ಲಿ ಯಾವುದೇ ಪಾಲು ಕೇಳುವಂತಿಲ್ಲ ಅಂತಾ ಇಬ್ಬರು ಪರಸ್ಪರ ಒಪ್ಪಿಕೊಂಡಿರುತ್ತಾರೆ.

ಅಹ್ಮದ ಅಲಿ @ ಅರಹಾನ ಈತನ ಶಾಲೆಯ ಖರ್ಚು ಹಾಗೂ ಇತರೇ ಖರ್ಚುಗಳನ್ನು ಹಾಗೂ ಆತನ ಸಂಪೂರ್ಣ ಜವಾದ್ದಾರಿಯನ್ನು ಪ್ರತಿವಾದಿಯು ನೋಡಿಕೊಳ್ಳಲು ಒಪ್ಪಿಕೊಂಡಿರುತ್ತಾನೆ.

ವಾದಿ ಮತ್ತು ಪ್ರತಿವಾದಿ ಇಬ್ಬರು, ಇವರಿಬ್ಬರ ಜೀವನಕ್ಕೆ ಸಂಭಂಧಪಟ್ಟಂತೆ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ದಾವೆ ಹೂಡುವುದಾಗಲಿ, ಯಾವುದೇ ಠಾಣೆಗಳಲ್ಲಿ ದೂರು ಸಲ್ಲಿಸುವುದಾಗಲಿ ಮಾಡುವಂತಿಲ್ಲ ಎಂದು ಇಬ್ಬರು ಒಪ್ಪಿಕೊಂಡಿರುತ್ತಾರೆ.

ವಾದಿ ಮತ್ತು ಪ್ರತಿವಾದಿಯರು ತಮ್ಮ ಮಧ್ಯ, ದಿನಾಂಕ: 27–04–2014 ರಂದು ಆದ ವಿವಾಹವನ್ನು ರದ್ದುಗೊಳಿಸಲು ಪರಸ್ಪರ ಒಪ್ಪಿಕೊಂಡಿದ್ದು ಇರುತ್ತದೆ.

ವಾದಿ ಮತ್ತು ಪ್ರತಿವಾದಿ ಪರಸ್ಪರರು ಈ ಅಪಸತ ಅರ್ಜಿಗೆ ತಮ್ಮ ತಮ್ಮ ಸ್ವ–ಇಚ್ಛೇಯಿಂದ ಮತ್ತು ಅಕ್ಕಲ ಹುಷಾರದಿಂದ ಒಬ್ಬರಿಗೊಬ್ಬರು ತಿಳಿದುಕೊಂಡು ಹಾಗೂ ಓದಿಕೊಂಡು ಈ ಅಪಸತ ಅರ್ಜಿಗೆ ಸಹಿಯನ್ನು ಹಾಕಿದ್ದು ಇರುತ್ತದೆ. ಇದಕ್ಕೆ ಯಾರದೇ ಒತ್ತಾಯ ಮತ್ತು ಬೆದರಿಕೆ ಇರುವುದಿಲ್ಲ.

ಈ ದಾವೆಯ ಖರ್ಚುಗಳನ್ನು ವಾದಿ ಮತ್ತು ಪ್ರತಿವಾದಿಯರು ತಮ್ಮ ತಮ್ಮ ಖರ್ಚುನ್ನು ತಾವೇ ಭರಣಾ ಮಾಡಿಕೊಳ್ಳಲು ತಯಾರಿರುತ್ತಾರೆ.

ಕಾರಣ ಈ ಮೇಲೆ ಹೇಳಿದ ಷರತ್ತುಗಳ ಆಧಾರದ ಮೇಲೆ ವಾದಿ ಮತ್ತು ಪ್ರತಿವಾದಿಯರು ಒಬ್ಬರಿಗೊಬ್ಬರು ವಿವಾಹ ವಿಚ್ಛೇಧನ ನೀಡಲು ತಯಾರಿದ್ದು, ಮಾನ್ಯ ನ್ಯಾಯಾಲಯದವರು ಸದರಿ ಕಾರಣಗಳನ್ನು ಮತ್ತು ಷರತ್ತುಗಳನ್ನು ಪರಿಗಣಿಸಿ, ಇವರಿಬ್ಬರ ಮಧ್ಯ ದಿನಾಂಕ: 27–04–2014 ರಂದು ನಡೆದ ವಿವಾಹವನ್ನು ರದ್ದುಗೊಳಿಸಿ ಅರ್ಜಿಯನ್ನು ಮಂಜೂರು ಮಾಡಬೇಕೆಂದು ವಿನಂತಿ ಇರುತ್ತದೆ.

**(Given under my hand and seal of the Court on this the 11th July 2026)**

**Prl. Civil Judge and JMFC,**
**Indi.**

**BILL OF COSTS**

| Particular of CF paid | By Plffs. Rs. | By Defts. Rs. |
|---|---|---|
| 1.Court fee paid on plaint. | 100.00 | -- |
| 2. -do- on power. | -- | -- |
| 3. -do- on application | -- | -- |
| 4.Process fee | 10.00 | -- |
| 5. Advocate's fee | -- | -- |
| Total Rs. | 110.00 | -- |

Note: 1)Valuation slip, Compromise petition forms part and parcel of the decree.

**Draft Decree Notified on : 17.07.2026**
**Decree signed on : 18.07.2026**

Prepared by Verified by

**Sd/-**
**Prl.Civil Judge and JMFC,Indi.**

| | |
|---|---|
| Decree Clark | Sheristedar<br>(Adm.) |